ಶ್ರೀ ಟಿ. ಆರ್. ಶ್ಯಾಮಣ್ಣ :—ಸಿವಿಕ್ ಅಮಿನಿಟೀಸ್ ಒಳಗೆ ಬಿಟ್ಟಿರತಕ್ಕ ಓಪನ್ ಸ್ಪೇಷಸ್‌ನಲ್ಲಿ ಟ್ರಸ್ಟ್ ಬೋರ್ಡಿನವರು ಹಂಚುತ್ತಿದ್ದಾರೆ, ಅದನ್ನು ತಡೆ ಗಟ್ಟುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :—ಗ್ರೀನ್ ಬೆಲ್ಟ್ ಏರಿಯಾಗೋಸ್ಕರ ಆಲಾಟ್ ಮಾಡಿದ್ದನ್ನು ಹಂಚುತ್ತಿಲ್ಲ, ಅಂಥ ವಿಷಯಗಳು ತಮ್ಮ ಗಮನಕ್ಕೆ ಬಂದಿದ್ದರೆ ನನಗೆ ಬರೆಯಿರಿ.

ಶ್ರೀ ಎಂ. ಎಸ್. ಕೃಷ್ಣನ್ :— ಗ್ರೀನ್ ಬಿಲ್ಟ್ ಏರಿಯೂ ಬೆಂಗಳೂರು ನುತ್ತ ಮುತ್ತ ಎಷ್ಟು ದೂರದವರೆಗೆ ಇದೆ, ಎಷ್ಟು ದೂರದಲ್ಲಿ ಇರುತ್ತದೆ ಅದರ ವಿವರಣೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :—ಗ್ರೀನ್ ಬೆಲ್ಟ್ ಏರಿಯಾ ಎಂದರೆ ಮುನಿಸಿಪಲ್ ಏರಿಯೂ ಏನು ಇದೆ ಅದರ ನುತ್ತ ಮುತ್ತ ೫ ಮೈಲಿ ಪ್ರದೇಶ ಏನು ಇದೆ. ಅದು ಮತ್ತು ಆ ಏರಿಯಾದಿಂದ ಒಂದು ಫರ್ಲಾಂಗ್ ಆಗುತ್ತದೆ. ಅದು ಗ್ರೀನ್ ಬೆಲ್ಟ್ ಏರಿಯಾ ಆಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು :— ಸ್ವಾಮಿ ಬೆಂಗಳೂರು ಪಟ್ಟಣದಲ್ಲಿ ಗ್ರೀನ್‌ಬೆಲ್ಟ್‌ಗೆ ಉತ್ತೇಜನ ಕೊಡುವ ಉದ್ದೇಶದಿಂದ ಲೇಜಿಸ್‌ಲೇಷನ್ ತೆಗೆದುಕೊಂಡು ಬರುತ್ತಿರಾ ? ಕಾರ್ಪೊರೇಷನ್‌ನವರು ಟ್ರಸ್ಟ್ ಬೋರ್ಡಿನವರು ಸ್ಟೇಟ್ ಆಲಾಟ್ ಮಾಡುವ ಕಾಲದಲ್ಲಿ ಅವರೇ ಮರಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುವುದು ಅಥವಾ ಯಾರಾದರೂ ಪ್ರೈವೇಟ್ ಪಾರ್ಟಿಸ್‌ಗೆ ಮರ ಗಳನ್ನು ಹೆಚ್ಚಿನ ರೀತಿಯಲ್ಲಿ ಬೆಳೆಸುವುದಕ್ಕೆ ಉತ್ತೇಜನ ಕೊಡುವುದು, ಇದರ ಬಗ್ಗೆ ಒಂದು ಲೆಜಿಸ್‌ಲೇಷನ್ ತರುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ಮತ್ತು ಅದನ್ನು ಯಾವಾಗ ತರುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :—ಲೆಜಿಸ್‌ಲೇಷನ್ ಅನಾವಶ್ಯಕ, ಪ್ಲಾನಿಂಗ್ ಅಥಾರಿಟಿ ಏನು ಇದೆ ಅವರೇ ಮಾಡುತ್ತಾರೆ, ಪ್ಲಾನಿಂಗ್ ಆಕ್ಟ್ ಕೂಡ ಇದೆ. ಅದರ ಪ್ರಕಾರ ಕೆಲಸ ನಾವು ತೆಗೆದುಕೊಳ್ಳುತ್ತೇವೆ. ಪ್ರತ್ಯೇಕವಾಗಿ ನಮಗೆ ಆಕ್ಟ್ ಬೇಕಾಗಿಲ್ಲ.

ALLOTMENT OF FERTILISERS TO BELLARY DISTRICT

172. SRI B. E. RAMAIAH (Siruguppa)—

Will the Minister for Agriculture and Forests be pleased to state :—

(*a*) whether the Government is aware that the allotment of fertilisers has not been made to Bellary District even though the sowing season has already commenced;

(*b*) the action taken to meet the demand for the supply of fertilisers ?

SRI K.H. PATIL :—(Minister for Agriculture and Forests) (*a*) Allotments has been made to Bellary District. There was, however, some difficulty in the receipt of the fertilisers from manufacturers.

(*b*) 1. Orders have been issued for movement of 150 tonnes of urea from Shimoga, 150 tonnrs from Davanagere and 100 tonnes from Koppal.

2. In addition to this, allotment of 1,000 tonnes of calcium ammonium Nitrate from the pool for Rabi Season has been made.

3. Government have been taken over partial control over the distribution of non-pool fertilisers recently.

ಶ್ರೀ ಬಿ. ಇ. ರಾಮಯ್ಯ :—ನಿಮ್ಮ ಉತ್ತರದ ಪ್ರಕಾರ ಸ್ವಲ್ಪ ಗೊಬ್ಬರ ಅಲಾಟ್ ಮಾಡಿದ್ದೇವೆಂದು ಹೇಳಿದ್ದಿರಿ. ಆದರೆ ಅಲ್ಲಿ ಸುಮಾರು ಒಂದು ಲಕ್ಷ ಎಕರೆ ನೀರಾವರಿ ಇದೆ. ಅಲ್ಲಿಗೆ ಗೊಬ್ಬರ ಅಲಾಟ್ ಮಾಡದಿದ್ದರೆ ಬೆಳೆ ಬರುವುದಿಲ್ಲ ಎಂದು ತಮಗೆ ಗುರುತು ಇದೆಯೇ ?

† ಶ್ರೀ ಕೆ. ಎಚ್. ಪಾಟೀಲ್ :—ಪೂರ್ಯೆನಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಇ. ರಾಮಯ್ಯ :— ಬಳ್ಳಾರಿ ಜಿಲ್ಲೆಗೆ ಎಷ್ಟು ಗೊಬ್ಬರ ಕೊಟ್ಟಿದ್ದೀರಿ ಎಂದು ಉತ್ತರ ಕೊಡಲಿಲ್ಲ.

ಶ್ರೀ ಕೆ. ಎಚ್. ಪಾಟೀಲ್ :—ಬಳ್ಳಾರಿ ಜಿಲ್ಲೆಗೆ ನಿನ್ನೆ ದಿವಸ ನಕ್ಷೆ ತಯಾರು ಮಾಡಿದ್ದೇವೆ ಅಲ್ಲದೆ 836 ಟನ್‌ಗಳನ್ನು ಕೊಟ್ಟಾಗಿದೆ. ಅದು ಈ ರೀತಿ ಇದೆ :—

Ammonium Sulphate	....	10 tons.
Urea	....	110 ,,
Calcium Ammonium Nitrate	...	12 ,,
Diammonium Phosphate	...	192 ,,
Muriate of Potash	....	211 ,,
Super Phosphate	....	129 ,,
NPK Complex	---	172 ,,

ಒಟ್ಟು 836 ಟನ್‌ಗಳನ್ನು ಕಳುಹಿಸಿದ್ದೇವೆ. ಇನ್ನು ಹೆಚ್ಚು ಬೇಕಾಗುತ್ತದೆಂಬ ಅರಿವು ಸರಕಾರಕ್ಕೆ ಇದೆ. ಗೊಬ್ಬರ ಬಂದಾಗ ಮತ್ತೆ ಅದನ್ನು ಪೂರೈಸುತ್ತೇವೆ.

ಶ್ರೀ ಬಿ. ಇ. ರಾಮಯ್ಯ :—800 ಟನ್ ಕಳುಹಿಸಿದ್ದೇವೆಂದು ಹೇಳುತ್ತಿದ್ದೀರಿ, ಸೆಪ್ಟೆಂಬರ್ ತಿಂಗಳೊಳಗೆ ಗೊಬ್ಬರ ಹಾಕದಿದ್ದರೆ ಬೆಳೆ ಬರುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ ಎಚ್. ಪಾಟೀಲ್ : ಸೆಪ್ಟೆಂಬರ್ ತಿಂಗಳೊಳಗೆ ಹಾಕದಿದ್ದರೆ ಬೆಳೆ ಬರುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಎಷ್ಟು ಬೆಳೆ ಬರಬೇಕಾಗಿತ್ತೋ ಅದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬರಬಹುದು. ಗೊಬ್ಬರ ಇಲ್ಲದೇ ಇದ್ದಾಗ ಎಷ್ಟೇ ಅರಿವು ಇದ್ದರೂ ಕಳುಹಿಸುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ : ಬಳ್ಳಾರಿ ಜಿಲ್ಲೆಗೆ ಗೊಬ್ಬರದ ಬೇಡಿಕೆ ಎಷ್ಟು ?

ಶ್ರೀ ಕೆ. ಎಚ್. ಪಾಟೀಲ್ : ಅದು ನನ್ನ ಗಮನಕ್ಕೆ ಬಂದಿಲ್ಲ. ಬೇಡಿಕೆ ಮೇಲೆ ಗೊಬ್ಬರ ಪೂರವಟೆ ಮಾಡುವುದು ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಬಳ್ಳಾರಿಯಲ್ಲಿ ಗೊಬ್ಬರ ಸರಿಯಾಗಿ ತೂಕ ಮಾಡುವುದಿಲ್ಲ. ಮೂಟೆ ಗಟ್ಟಲೆ ಚೀಲ ಕೊಟ್ಟರೂ ಕೊನೆಗೆ ರೈತರ ಕೈಗೆ ಸಿಗಬೇಕಾದರೆ ಖಾಲಿ ಚೀಲ ಸಿಗುತ್ತದೆ. ಆದುದರಿಂದ ಗೊಬ್ಬರದ ತೂಕವನ್ನು ಸರಿಯಾಗಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ :—ಇದು ಪ್ರಶ್ನೆಗೆ ಸಂಬಂಧಪಟ್ಟದ್ದು ಅಲ್ಲ, ಆದರೂ ಸಹ ಹೇಳುತ್ತೇನೆ. ಆ ರೀತಿ ಗೊಬ್ಬರ ಹಂಚುವಾಗ ತೂಕ ಕಡಿಮೆ

(ಶ್ರೀ ಕೆ. ಎಚ್. ಪಾಟೀಲ್)

ಆಹರೆ ಅಗ್ರಿಕಲ್ಚರಲ್ ಅಫೀಸರ್‌ಗಳಿಗೆ ತಿಳಿಸಿದರೆ ಅದರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೇವೆ. ತೂಕ ಕೊನೆಯ ಹಂತದವರೆಗೆ ಒಂದೇ ರೀತಿಯಾಗಿರಬೇಕು. ಕಡಿಮೆ ಇದ್ದರೆ ಕಳವು ಮಾಡುತ್ತಾರೆಂದು ಆಗುತ್ತದೆ. ಆ ರೀತಿ ಕಳವು ಮಾಡಿರುವುದನ್ನು ನನ್ನ ನಜರಿಗೆ ತಂದರೆ ಶಿಕ್ಷೆ ಮಾಡುತ್ತೇನೆ.

ಶ್ರೀ ಬಿ. ಇ. ರಾಮಯ್ಯ :—ಮೊದಲು ಏನು ಇತ್ತು ಪೂಲ್ ಕೋಟಾ ಮತ್ತು ನಾನ್ ಕೋಟಾ, ಅವೆರಡನ್ನೂ ಒಟ್ಟಿಗೆ ಸೇರಿಸಿ 800 ಟನ್ ಅಲಾಟ್ ಮಾಡಿದ್ದೀರಿ. ಗೊಬ್ಬರ ಕಡಿಮೆಯಾದರೆ ಯೀಲ್ಡ್ ಕಡಿಮೆಯಾಗುತ್ತದೆ. ಆದುದರಿಂದ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ : ಈಗಾಗಲೇ ಹೆಚ್ಚೆಚ್ಚು ಗೊಬ್ಬರದ ಪುರವಣೆ ಮಾಡಿದ್ದೇವೆ, ಇನ್ನು ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆಯೋ ಅದನ್ನೆಲ್ಲಾ ತೆಗೆದುಕೊಳ್ಳುತ್ತೇವೆ.

MADAM SPEAKER :—Now Question hour is over.

QUESTION & ANSWERS ON THE DAY
(but not taken up)

BLACKMARKETEERS IN GULBARGA AND BIDAR DISTRICTS

136. SRI BAPURAO ANANDRAO (Basavakalyan).—

Will the Minister of State for Food and Civil Supplies be pleased to state :—

(*a*) whether the Government has prepared a list of professional blackmarketeers in Gulbarga and Bidar Districts;

(*b*) if so, the names of black marketeers in food grains and other essential commodities (Talukawise information may be furnished) and action taken against such blackmarketeers ;